ಸಂಖ್ಯೆ: ಬಿ9-ನೇಮಕಾತಿ-ವಿವ-1/2019-20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ: 04 -03-2022

ಇವರಿಗೆ,
ಅರಣ್ಯ ಸಂರಕ್ಷಣಾಧಿಕಾರಿಗಳು
ಚಾಮರಾಜನಗರ ವೃತ್ತ
ಚಾಮರಾಜನಗರ

**ವಿಷಯ:** 339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಕುರಿತು 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯನ್ನು ನಡೆಸುವ ಕುರಿತು

**ಉಲ್ಲೇಖ:**
1. ಈ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2019-20 ದಿನಾಂಕ: 02.03.2020
2. ಈ ಕಛೇರಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ದಿನಾಂಕ: 07.02.2022
3. ನಿಮ್ಮ ಕಛೇರಿ ಪತ್ರ ಸಂಖ್ಯೆ: ಎ2/ಸಿಬ್ಬಂದಿ/ಅ.ರ.ನೇ.ನೇ/ಸಿಆರ್-12/2021-22 ದಿನಾಂಕ: 04.03.2022
4. ಈ ಕಛೇರಿ ಪ್ರಕಟಣೆ ದಿನಾಂಕ: 04.03.2022

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ 339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ (2) ರ ಈ ಕಛೇರಿ ಪ್ರಕಟಣೆಯಲ್ಲಿ ದಿನಾಂಕ: 05.12.2021 ರಂದು ನಡೆಸಲಾದ ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳು ಹಾಗೂ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳು ಸೇರಿದಂತೆ ಮೆರಿಟ್ ಆಧಾರದ ಮೇಲೆ ಮತ್ತು ಚಾಲ್ತಿಯಲ್ಲಿರುವ ಎಲ್ಲಾ ಮೀಸಲಾತಿ ನಿಯಮಗಳ ಅನುಸಾರ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಚಾಮರಾಜನಗರ ವೃತ್ತಕ್ಕೆ ಸಂಬಂಧಿಸಿದ 32 ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 14.03.2022 ರಂದು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ ವೃತ್ತ, ಚಾಮರಾಜನಗರ ಹಾಗೂ ದಿನಾಂಕ: 15.03.2022 ಮತ್ತು 16.03.2022 ರಂದು ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಯನ್ನು ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆ, ಚಾಮರಾಜನಗರ ಇಲ್ಲಿ ನಡೆಸಲಾಗುವುದೆಂದು ಉಲ್ಲೇಖ (3) ರ ಪತ್ರದಲ್ಲಿ ಈ ಕಛೇರಿಗೆ ಮಾಹಿತಿಯನ್ನು ಸಲ್ಲಿಸಿರುತ್ತೀರಿ.

ಉಲ್ಲೇಖ (4) ರ ಈ ಕಛೇರಿ ಪ್ರಕಟಣೆಯಲ್ಲಿ ಚಾಮರಾಜನಗರ ವೃತಕ್ಕೆ ಸಂಬಂಧಿಸಿದಂತೆ ಒಟ್ಟು 32 ಅಭ್ಯರ್ಥಿಗಳಿಗೆ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಹಾಗೂ ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಯನ್ನು ನಿಗದಿಪಡಿಸಿದ ದಿನಾಂಕ ಮತ್ತು ಸ್ಥಳದ ಮಾಹಿತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ ಹಾಗೂ ಸದರಿ ಮಾಹಿತಿಯನ್ನು ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಹಾಗೂ ಇ-ಮೇಲ್ ಮೂಲಕ ಕಳುಹಿಸಲಾಗಿದೆ.

ದಿನಾಂಕ: 14.03.2022 ರಂದು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಹಾಗೂ ದಿನಾಂಕ: 15.03.2022 ಮತ್ತು 16.03.2022 ರಂದು ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಗೆ ಸಂಬಂಧಿಸಿದ ದಾಖಲೆ / ನಮೂನೆಗಳನ್ನು ಈ ಕಛೇರಿಯಿಂದ ಮುದ್ದಾಂ ಆಗಿ ಪಡೆಯಲು ನಿಮ್ಮ ಕಛೇರಿಯಿಂದ ಒಬ್ಬ ಸಿಬ್ಬಂದಿಯನ್ನು ಇಂದೇ ಈ ಕಛೇರಿಗೆ ನಿಯೋಜಿಸಿ, ದಾಖಲೆಗಳನ್ನು ಪಡೆಯುವುದು.

ಮುಂದುವರೆದು, ದಿನಾಂಕ: 14.03.2022 ರಂದು ನಡೆಯುವ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಹಾಗೂ ದಿನಾಂಕ: 15.03.2022 ಮತ್ತು 16.03.2022 ರಂದು ನಡೆಯುವ ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಗೆ ನಿಮ್ಮ ನಿರ್ದೇಶನದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯಲ್ಲಿ ಇತರೆ ಅಧಿಕಾರಿ / ಸಿಬ್ಬಂದಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ, ಇವರ ಮೇಲ್ವಿಚಾರಣೆಯಲ್ಲಿ ಅಭ್ಯರ್ಥಿಗಳು ಮತ್ತು ವೈದ್ಯರ ನಡುವೆ ಸಮನ್ವಯತೆ ಸಾಧಿಸಿ, ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಹಾಗೂ ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ನ್ನು ಸುಸೂತ್ರವಾಗಿ ನಡೆಸಿ, ಈ ಕಛೇರಿಯಿಂದ ಪಡೆದ ನಿಗಧಿತ ನಮೂನೆಯ ಅಂಕಣಗಳಲ್ಲಿ ಅಭ್ಯರ್ಥಿಗಳ ಪರೀಕ್ಷಾ ಫಲಿತಾಂಶವನ್ನು ದಾಖಲಿಸುವಂತೆ ತಿಳಿಸಿದೆ ಮತ್ತು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Document Verification) ಹಾಗೂ ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಪೂರ್ಣಗೊಂಡ ನಂತರ ಎಲ್ಲಾ ವರದಿ ಹಾಗೂ ದಾಖಲೆಗಳನ್ನು ಸುರಕ್ಷಿತವಾಗಿ ದಿನಾಂಕ: 21.03.2022 ರೊಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸುವಂತೆ ಸೂಚಿಸಿದೆ.

4/3/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2019-20 ದಿನಾಂಕ: 02-03-2020**

**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

## ಪ್ರಕಟಣೆ

339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಸಂಬಂಧ ದಿನಾಂಕ: 07.02.2022 ರಂದು ಅಧಿಸೂಚನೆಯಲ್ಲಿ ಅಧಿಸೂಚಿಸಿರುವ 11 ವೃತ್ತಗಳ ಅರಣ್ಯ ರಕ್ಷಕ ಹುದ್ದೆಗಳಿಗೆ ವೃತ್ತವಾರು ಪ್ರತ್ಯೇಕವಾಗಿ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಚಾಮರಾಜನಗರ ವೃತ್ತಕ್ಕೆ ಸಂಬಂಧಿಸಿದ 32 ಅರ್ಹ ಅಭ್ಯರ್ಥಿಗಳಿಗೆ ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test) ಪರೀಕ್ಷೆ ಹಾಗೂ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Documents Verification) ನ್ನು ಈ ಕೆಳಕಂಡ ದಿನಾಂಕ ಮತ್ತು ಸ್ಥಳಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

### I. ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Documents Verification)

| ಕ್ರ.ಸಂ. | ದಿನಾಂಕ ಮತ್ತು ಸಮಯ | ಪರೀಕ್ಷೆ | ಪರೀಕ್ಷೆ ನಡೆಯುವ ಸ್ಥಳ |
|---|---|---|---|
| 1 ರಿಂದ 32 ರ ವರೆಗಿನ ಎಲ್ಲಾ ಅಭ್ಯರ್ಥಿಗಳಿಗೆ | 14.03.2022 ಬೆಳಿಗ್ಗೆ 10.00 ಗಂಟೆಗೆ | ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ (Original Documents Verification) | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಚಾಮರಾಜನಗರ ವೃತ್ತ, ಚಾಮರಾಜನಗರ ಇಲ್ಲಿ ಹಾಜರಾಗುವುದು |

### II. ವೈದ್ಯಕೀಯ ಅರ್ಹತೆ ಪರೀಕ್ಷೆ (Medical Fitness Test)

| ಕ್ರ. ಸಂ. | ಅಭ್ಯರ್ಥಿಯ ನೋಂದಣಿ ಸಂಖ್ಯೆ | ಅಭ್ಯರ್ಥಿಯ ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವೈದ್ಯಕೀಯ ಪರೀಕ್ಷೆ ನಡೆಸುವ ಆಸ್ಪತ್ರೆ ದಿನಾಂಕ ಮತ್ತು ಸಮಯ |
|---|---|---|---|---|
| **ದಿನಾಂಕ: 15.03.2022 ಮಂಗಳವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ** | | | | |
| 1 | 2154123 | 4406067 | RATANKUMAR M B | ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆ ಚಾಮರಾಜನಗರ – 571 313 ಇಲ್ಲಿ ಹಾಜರಾಗುವುದು<br>ದಿನಾಂಕ: 15.03.2022<br>ಸಮಯ: ಬೆಳಿಗ್ಗೆ 10.00 ಗಂಟೆಗೆ |
| 2 | 2058883 | 4404300 | SANJAY M | |
| 3 | 2109852 | 4403868 | BASAVANNA C | |
| 4 | 2038847 | 4401310 | SURESHA P | |
| 5 | 2046342 | 4401607 | NINGARAJU M | |
| 6 | 2040505 | 4401368 | BEERAPPA KARIGAR | |
| 7 | 2092769 | 4403168 | SANJUNATH AYATTI | |
| 8 | 2054441 | 4401904 | MANU B R | |
| 9 | 2066836 | 4402352 | CHANDRASHEKHARA S D | |
| 10 | 2053915 | 4401893 | BHIMAPPA H DASAR | |
| 11 | 2103464 | 4404237 | PRAVEEN M | |
| 12 | 2043843 | 4401512 | PRATHAP A R | |
| 13 | 2012232 | 4400335 | SIDDAPPA M | |
| 14 | 2022268 | 4400642 | PRAVEENA B | |
| 15 | 2054420 | 4401906 | PRADEEPKUMAR M | |
| 16 | 2022253 | 4400623 | MADDI BOODAVVARA MANJUNATHA | |

| ಕ್ರ. ಸಂ. | ಅಭ್ಯರ್ಥಿಯ ನೋಂದಣಿ ಸಂಖ್ಯೆ | ಅಭ್ಯರ್ಥಿಯ ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವೈದ್ಯಕೀಯ ಪರೀಕ್ಷೆ ನಡೆಸುವ ಆಸ್ಪತ್ರೆ ದಿನಾಂಕ ಮತ್ತು ಸಮಯ |
|---|---|---|---|---|
| **ದಿನಾಂಕ: 16.03.2022 ಬುಧವಾರ ಸಮಯ: ಬೆಳಿಗ್ಗೆ 09.00 ಗಂಟೆಗೆ** | | | | |
| 17 | 2119495 | 4404340 | VIJAYA M | ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆ<br>ಚಾಮರಾಜನಗರ – 571 313<br>ಇಲ್ಲಿ ಹಾಜರಾಗುವುದು<br><br>ದಿನಾಂಕ: 16.03.2022<br>ಸಮಯ: ಬೆಳಿಗ್ಗೆ 10.00 ಗಂಟೆಗೆ |
| 18 | 2037806 | 4401256 | SANDESH YALAKAR | |
| 19 | 2095493 | 4403261 | LINGARAJU | |
| 20 | 2068186 | 4402305 | HAJIMALLINGPATEL ATTAR | |
| 21 | 2003525 | 4401020 | JAYAPRAKASHA K | |
| 22 | 2151542 | 4405906 | BASAVANNA M | |
| 23 | 2052064 | 4401816 | APPU Y S | |
| 24 | 2168600 | 4406878 | MAHESHA M | |
| 25 | 2056033 | 4401967 | SHIVARAJU D | |
| 26 | 2122735 | 4404501 | PRASHANTHU B | |
| 27 | 2152016 | 4405985 | SHIVAKUMAR D M | |
| 28 | 2027726 | 4402385 | RAJU S | |
| 29 | 2110879 | 4403935 | SHIVAKUMAR P | |
| 30 | 2165915 | 4406709 | MAHESHA | |
| 31 | 2027329 | 4400843 | LINGARAJU B L | |
| 32 | 2160489 | 4406402 | MAHAMADSAB SAMPAGAON | |

**ವಿಶೇಷ ಸೂಚನೆ:**

1. ವೈದ್ಯಕೀಯ ಅರ್ಹತೆ (Medical Fitness Test) ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಇತ್ತೀಚಿನ 6 ಭಾವಚಿತ್ರ (Passport Size) ಹಾಗೂ ಸರ್ಕಾರವು ನಿಗಧಿಪಡಿಸಿದ ಮೂಲ ಗುರುತಿನ ಚೀಟಿ (ಚುನಾವಣಾ ಫೋಟೋ ಗುರುತಿನ ಚೀಟಿ / ಆಧಾರ್ ಕಾರ್ಡ್ / ಪಾಸ್‌ಪೋರ್ಟ್ / ಚಾಲನಾ ಪರವಾನಗಿ ಪ್ಯಾನ್ ಕಾರ್ಡ್) ಕಡ್ಡಾಯವಾಗಿ ತರತಕ್ಕದ್ದು ಹಾಗೂ ಅದರ ಜೆರಾಕ್ಸ್ ಪ್ರತಿಯೊಂದಿಗೆ ಮೇಲೆ ತಿಳಿಸಿರುವ ಪರೀಕ್ಷೆ ನಡೆಯುವ ಆಸ್ಪತ್ರೆಗೆ ನಿಗಧಿತ ಸಮಯದೊಳಗೆ ಹಾಜರಾಗಲು ತಿಳಿಸಿದೆ ಮತ್ತು ವೈದ್ಯಕೀಯ ಮಂಡಳಿಯು ನಿಗಧಿಪಡಿಸುವ ವೈದ್ಯಕೀಯ ಪರೀಕ್ಷಾ ಶುಲ್ಕವನ್ನು (ವೈದ್ಯಕೀಯ ಪರೀಕ್ಷಾ ಶುಲ್ಕ, ಕ್ಷ-ಕಿರಣ ಶುಲ್ಕ ಇತ್ಯಾದಿ) ತಮ್ಮ ಸ್ವಂತ ಖರ್ಚಿನಿಂದಲೇ ಭರಿಸತಕ್ಕದ್ದು.

2. ವೈದ್ಯಕೀಯ ಅರ್ಹತೆ (Medical Fitness Test) ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ಕೋವಿಡ್ ಲಸಿಕೆ ಪಡೆದಿರತಕ್ಕದ್ದು ಹಾಗೂ ಕೋವಿಡ್ ಲಸಿಕೆ ಪಡೆದಿರುವ ಸಂಬಂಧ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸತಕ್ಕದ್ದು ಹಾಗೂ ಯಾವುದೇ ಅಭ್ಯರ್ಥಿಯು ಕೆಮ್ಮು, ನೆಗಡಿ ಹಾಗೂ ಜ್ವರದ ಲಕ್ಷಣಗಳು ಇದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ.

3. ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಗೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ನಮೂದಿಸಿರುವ ಶೈಕ್ಷಣಿಕ ಅರ್ಹತೆ ದಾಖಲೆ ಹಾಗೂ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳ ಮೂಲ ದಾಖಲೆಗಳು ಹಾಗೂ ಸದರಿ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿದ ಪ್ರತಿಯನ್ನು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

4. ಮೂಲ ದಾಖಲೆ / ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸನ್ನಿವೇಶದಲ್ಲಿಯೂ ಕಾಲ ವಿಸ್ತರಣೆ ನೀಡಲಾಗುವುದಿಲ್ಲ.

5. ಅಭ್ಯರ್ಥಿಯು ತನ್ನ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಮಾಹಿತಿ / ವಿವರಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು. ಮೂಲ ದಾಖಲೆ / ಪ್ರಮಾಣ ಪತ್ರಗಳನ್ನು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು ಹಾಗೂ ಅವರನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

6. ಅಭ್ಯರ್ಥಿಯು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಯ ಸಮಯದಲ್ಲಿ ಸರ್ಕಾರವು ನಿಗಧಿಪಡಿಸಿದ ಯಾವುದಾದರೂ ಮೂಲ ಗುರುತಿನ ಚೀಟಿ (ಚುನಾವಣಾ ಫೋಟೋ ಗುರುತಿನ ಚೀಟಿ / ಆಧಾರ್ ಕಾರ್ಡ್ / ಪಾಸ್‌ಪೋರ್ಟ್ / ಚಾಲನಾ ಪರವಾನಗಿ ಪ್ಯಾನ್ ಕಾರ್ಡ್) ಕಡ್ಡಾಯವಾಗಿ ತರತಕ್ಕದ್ದು ಹಾಗೂ ಅದರ ಜೆರಾಕ್ಸ್ ಪ್ರತಿಯೊಂದಿಗೆ ಮೇಲೆ ತಿಳಿಸಿರುವ ಸ್ಥಳಕ್ಕೆ ನಿಗಧಿತ ಸಮಯದೊಳಗೆ ಹಾಜರಾಗಲು ತಿಳಿಸಿದೆ.

7. ಅಭ್ಯರ್ಥಿಗಳು ವೈದ್ಯಕೀಯ ಅರ್ಹತೆ ಪರೀಕ್ಷೆ ಹಾಗೂ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು. ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ.

4/3/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 04 .03.2022
ಸ್ಥಳ: ಬೆಂಗಳೂರು